(ಗೊಂದಲ)

ಉಪಾಧ್ಯಕ್ಷರು: ಅದಕ್ಕೆ ಅವರು ಸ್ಪಷ್ಟನೆ ಕೊಟ್ಟಿದ್ದಾರೆ. ಈಗ ಆ ವಿಚಾರವನ್ನು ಮುಗಿಸೋಣ.

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ: ಮಾನ್ಯ ಉಪ ಸಭಾಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಬರಗಾಲ ವಿಷಯದ ಬಗ್ಗೆ ಸರ್ಕಾರ ಏನೇನು ಮಾಡುತ್ತಿದೆ ಎಂದು ಹೇಳುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಇದನ್ನು ಅವರು ಬೇರೆ ವಿಚಾರದಲ್ಲಿ ತರಲಿ. ಬರಗಾಲದ ಬಗ್ಗೆ ನೀವು ಪ್ರತ್ಯೇಕವಾಗಿ ತನ್ನಿ. ಪ್ರತ್ಯೇಕವಾಗಿ ಅವರಿಗೆ ನೋಟೀಸ್ ಕೊಡಿ. ನೀವು ಬರಗಾಲದ ಬಗ್ಗೆ ಪ್ರತ್ಯೇಕವಾದ ನೋಟೀಸ್ ಕೊಡಿ, ಚರ್ಚೆಗೆ ಅವಕಾಶ ಮಾಡಿಕೊಡಲಾಗುತ್ತದೆ. please ಕುಳಿತುಕೊಳ್ಳಿ. ತಾವು ಪ್ರಸ್ತಾಪ ಮಾಡಿ. ಬರಗಾಲದ ಬಗ್ಗೆ ನೋಟೀಸ್ ಕೊಡಿ ಎಂದು ಹೇಳುತ್ತಲೇ ಇದ್ದೇನೆ. ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ): ಮಾನ್ಯ ಉಪಾಧ್ಯಕ್ಷರೆ, ನಾವು ಕಳೆದ ಮೂರು ದಿನಗಳಿಂದ ನಿಯಮ 60ರ ಅಡಿಯಲ್ಲಿ ಒಂದು ನಿಲುವಳಿ ಸೂಚನೆಯನ್ನು ನಾವು ಕೊಡುತ್ತಿದ್ದೇವೆ. ನಿನ್ನೆ ಕಾರಣಾಂತರಗಳಿಂದ ಮುಂದಕ್ಕೆ ಹೋಗಿದೆ, ಮತ್ತೆ ಇವತ್ತು ಕೊಟ್ಟಿದ್ದೇವೆ. ವಿಚಾರವಿಷ್ಟೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ. ಬಹಳ ಸಂತೋಷ. ಏಕೆಂದರೆ, ನಮಗೆ ಉತ್ತರ ಹಾಗೂ ನ್ಯಾಯ ದೊರೆಯುತ್ತದೆ ಎಂದು ಹೇಳಿ ಇವತ್ತು ಈ ಒಂದು ಪ್ರಸ್ತಾವನೆಯನ್ನು ನಾನು ಮಾಡುತ್ತಿದ್ದೇನೆ. ಈಗ ಐದು ಕ್ಷೇತ್ರಗಳಲ್ಲಿ ಉಪ ಚುನಾವಣೆ ಬರುತ್ತಿದೆ. ಈ ಮಧ್ಯದ ಆಪರೇಷನ್ ಕಮಲದಿಂದ ಉಪ ಚುನಾವಣೆಗಳು ಬರುತ್ತಿವೆ. ಮೂರು ಕ್ಷೇತ್ರಗಳಲ್ಲಿ ರಾಜೀನಾಮೆಯಿಂದ

ತೆರವಾದಂಥಾದ್ದು. ಇನ್ನು ಎರಡು ಕ್ಷೇತ್ರಗಳಲ್ಲಿ ಸ್ವಂತ ಇಚ್ಛೆಯಿಂದ ರಾಜೀನಾಮೆಯನ್ನು ಕೊಟ್ಟು, ಆ ಕಡೆ ಆಪರೇಷನ್ ಕಮಲದ ಯಶಸ್ಸಿನ ಹಿನ್ನೆಲೆಯಲ್ಲಿ ಈ ಚುನಾವಣೆ ಬರುತ್ತಿದೆ. ನಿನ್ನೆ ಚೆನ್ನಪಟ್ಟಣದಲ್ಲಿ ಒಂದು announce ಆಗಿದೆ. ನಾವು ಏಕೆ ಈ ವಿಚಾರವನ್ನು ತಮ್ಮ ಮುಖಾಂತರ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದರೆ, ಬೇಕಾದಷ್ಟು ಚುನಾವಣೆಗಳು ನಡೆದಿವೆ. ನಾನೂ ಸಹ ಉಪ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದೇನೆ. ನಾನು ಸರ್ಕಾರದಲ್ಲಿದ್ದಾಗ ಚುನಾವಣೆಯಲ್ಲಿ ಸ್ಪರ್ಧೆ ಮಾಡಿ, ನಾನು ಹಾಗೂ ಈಶ್ವರಪ್ಪರವರೆಲ್ಲರೂ ಹೋರಾಟ ಮಾಡಿದ್ದು ಬಹುಶಃ ಅವೆಲ್ಲಾ ನೆನಪಿರಬಹುದು. ಆದರೆ, ಇತ್ತೀಚಿನ ದಿನಗಳಲ್ಲಿ . .

ಉಪಾಧ್ಯಕ್ಷರು: ಈ ವಿಚಾರ ನಿಲುವಳಿ ಸೂಚನೆಗೆ ಪೂರಕವಾಗಿರಬೇಕು. ನೀವು ಇಡೀ ವಿಚಾರವನ್ನು ಪ್ರಸ್ತಾಪ ಮಾಡಬೇಡಿ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ, ಇತ್ತೀಚಿನ ದಿನಗಳಲ್ಲಿ ಈ ರೀತಿಯಾದ ಚುನಾವಣೆಗಳು ಬಂದಾಗ ಸರ್ಕಾರ ಯಾವ ರೀತಿ ಅಧಿಕಾರವನ್ನು ದುರುಪಯೋಗ ಮಾಡುತ್ತಿದೆ, ಯಾವ ರೀತಿ ಗ್ರಾಂಟ್‌ಗಳನ್ನು ಕ್ಷೇತ್ರಗಳಿಗೆ ಬಿಡುಗಡೆ ಮಾಡುತ್ತಿದೆ, ಯಾವ ರೀತಿ ಕೆಲಸಗಳನ್ನು ತೆಗೆದುಕೊಳ್ಳುತ್ತಿದೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ನಾನು ತರಬೇಕಾಗುತ್ತದೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಗೋವಿಂದರಾಜನಗರ ಕ್ಷೇತ್ರಕ್ಕೆ 36 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಚನ್ನಪಟ್ಟಣ ಕ್ಷೇತ್ರಕ್ಕೆ ಏಳು ಕೋಟಿ ಆಗಿದೆ. ನಿನ್ನೆ BDCC ಬ್ಯಾಂಕ್ ವತಿಯಿಂದ ಸ್ತ್ರೀಶಕ್ತಿ ಸಂಘಗಳಿಗೆ ವಿಶೇಷವಾಗಿ ಹಣವನ್ನು ತರಿಸಿ BDCC ಬ್ಯಾಂಕ್‌ನಿಂದ ಸಂಘಗಳಿಗೆ ಹಣ ಬಿಡುಗಡೆಯಾಗಿದೆ. ರಾತ್ರಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ election announcement ಆಗಿದೆ. ಮಾನ್ಯ ಸೋಮಣ್ಣನವರು ಹೊಸದಾಗಿ ಮಂತ್ರಿಗಳಾಗಿದ್ದಾರೆ. ಬಹಳ ಸಂತೋಷ. ವ್ಯಾಪಕವಾಗಿ ಪ್ರತಿಯೊಬ್ಬರಿಗೂ ಮನೆ ಕೊಡುತ್ತೇನೆ, ನಿವೇಶನ ಕೊಡುತ್ತೇನೆ ಎಂದು ಹೇಳಿ, ಈಗಾಗಲೇ ಸರ್ವೆ ಕಾರ್ಯಕ್ರಮ ನಡೆದಿದೆ. ಆದರೆ, ನಂಜುಂಡಪ್ಪ ವರದಿಯಲ್ಲಿ ಚೆನ್ನಪಟ್ಟಣ second listನಲ್ಲಿದೆ.

(ಗೊಂದಲ)

ಉಪಾಧ್ಯಕ್ಷರು: ಈ ವಿಚಾರ ಬೇಡ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಇದು ರಾಜಕಾರಣ ಸ್ವಾಮಿ. ದಯವಿಟ್ಟು ನೀವು ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಮಾತನಾಡುವುದಕ್ಕೆ ಅವಕಾಶ ಕೊಡೋಣ. ನಿಲುವಳಿ ಸೂಚನೆಯೊಳಗೆ ಇದು ಬರುತ್ತದೆಯೇ ಎಂದು ನೋಡಬೇಕು. ಚರ್ಚೆ ಆಮೇಲೆ ಮಾಡೋಣ. Preliminary submission ನಲ್ಲಿ how can you submit all these aspects?

ಶ್ರೀ ಡಿ.ಕೆ. ಶಿವಕುಮಾರ್: ಸ್ವಾಮಿ ನೀವು ಮಾತನಾಡುವುದಕ್ಕೆ ಅವಕಾಶ ಕೊಡಿ. ನೀವು ಮಾತನಾಡುವುದಕ್ಕೆ ನನ್ನನ್ನು ಬಿಡುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಅವಕಾಶ ಕೊಡೋಣ. ನಿಲುವಳಿ ಸೂಚನೆ ಎಂದರೆ, how it will come within the purview of this?

ಶ್ರೀ ಡಿ.ಕೆ. ಶಿವಕುಮಾರ್: ಪರವಾಗಿಲ್ಲ. ನಿಮಗೇನೂ promotion ಸಿಗುವುದಿಲ್ಲ. ನೀವು ಏನೂ ತಲೆ ಕೆಡಿಸಿಕೊಳ್ಳಬೇಡಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: This is high. ಇದು ಅತಿ ಆಯಿತು. ನಾವು Chair ಜೊತೆ ಮಾತನಾಡುವಾಗ ಯಾವ ರೀತಿ ಮಾತನಾಡಬೇಕು. That is not right.

ಶ್ರೀ ಡಿ.ಕೆ. ಶಿವಕುಮಾರ್: ಆಯಿತು ತಪ್ಪು ಆಯಿತು.

ಉಪಾಧ್ಯಕ್ಷರು: ಈ ರೀತಿ ಮಾತನಾಡಿದರೆ ಹೇಗೆ? It is directly attaching the chair.

ಶ್ರೀ ಡಿ.ಕೆ. ಶಿವಕುಮಾರ್: ಇನ್ನು ಆ ರೀತಿ ಮಾಡುವುದಿಲ್ಲ ಬಿಡಿ. ಬಜೆಟ್‌ನಲ್ಲಿ ಹಣ ಬಿಡುಗಡೆಯಾಗಿ ಖರ್ಚು ಮಾಡುವುದಕ್ಕೆ ಆಗಿಲ್ಲ. ಕೋಟ್ಯಾಂತರ ರೂಪಾಯಿಗಳ ಹಣ ಈಗಾಗಲೇ ಬಜೆಟ್‌ನಲ್ಲಿ ಏನು ಪ್ಲಾನ್ ಇತ್ತು, ಅದನ್ನೇ ಕಾರ್ಯಕ್ರಮ ಮಾಡುವುದಕ್ಕೆ ಆಗಲಿಲ್ಲ. ಬರೀ election ಇದೆ ಎನ್ನುವ ಒಂದೇ ಒಂದು ಉದ್ದೇಶಕ್ಕೋಸ್ಕರ ಈ ಕ್ಷೇತ್ರದಲ್ಲಿ ಸರ್ಕಾರದ ವಿವಿಧ ಯೋಜನೆಯನ್ನು ತೆಗೆದುಕೊಂಡು ಈಗ ಕೆಲಸ ಪ್ರಾರಂಭ ಮಾಡುವುದಕ್ಕೆ ಹೊರಟು, ಅಲ್ಲಿ ಕಂಟ್ರಾಕ್ಟರ್ ಮತ್ತು ಕಾರ್ಯಕರ್ತರನ್ನು ಆಕರ್ಷಣೆ ಮಾಡುವಂಥ ಪ್ರಯತ್ನ ನಡೆಯುತ್ತಿದೆ. ಹಿಂದೆ ಮಧುಗಿರಿ, ಮದ್ದೂರು ಹಾಗೂ ತುರುವೇಕೆರೆಯಲ್ಲಿ election ನಡೆಯಿತು. ಆದರೆ, ಅಲ್ಲಿ ಚುನಾವಣೆಯಲ್ಲಿ ಇವರು ಸೋತ ಮೇಲೆ ಇದ್ದಕ್ಕಿದ್ದಂತೆ ಕೆಲಸ ನಿಂತು ಹೋಯಿತು. ಅಲ್ಲಿಯೂ ಇದೇ ರೀತಿಯಾಗಿ ದೊಡ್ಡವರ ಲಿಸ್ಟ್ ಅನ್ನು ಕೊಟ್ಟು ಕೋಟ್ಯಾಂತರ ರೂಪಾಯಿಗಳ ಹಣವನ್ನು ಮಾಡಿದರು. ಅಲ್ಲಿ ಅವರು ಸೋತರು ಎಂದ ತಕ್ಷಣ, ಮಧುಗಿರಿ ಹಾಗೂ ಮದ್ದೂರಿನಲ್ಲಿ ಗೆದ್ದು ಬಂದಂಥ ಆ ಇಬ್ಬರು ಹೆಣ್ಣು ಮಕ್ಕಳು ಇಲ್ಲಿ ಈಗ ಇಲ್ಲ. ಅಲ್ಲಿ ಅವರ ಕ್ಷೇತ್ರಗಳಲ್ಲಿ ಕೆಲಸವೇ ನಿಂತು ಹೋಯಿತು. ಆ ತುರುವೇಕೆರೆಯವರು ಮಾತ್ರ ಸ್ವಲ್ಪ ಗಲಾಟೆ ಮಾಡಿದ್ದರಿಂದ ಒಂದಿಷ್ಟು ಕೆಲಸಗಳು ಆಯಿತು. ಮಾನ್ಯ ಮುಖ್ಯಮಂತ್ರಿಗಳಿಗೆ ಏಕೆ ಈ ರೀತಿ ಮನೋಭಾವ ಬಂದಿದೆ ಎಂದು ಅರ್ಥವಾಗುತ್ತಿಲ್ಲ. ಬಹಳ ದೊಡ್ಡ ಮನೋಭಾವ ಬಂದಿದೆ. ನಮ್ಮ ಬಸವರಾಜ ಬೊಮ್ಮಾಯಿಯವರು ನನಗೆ ಸ್ವಾಮಿ ವಿವೇಕಾನಂದರವರು ಹೇಳಿದ ಮಾತನ್ನು ನನಗೆ ಹೇಳಿಕೊಟ್ಟರು. 'Be bold hearted when you are defeated, be large hearted when you are victorious.' ಇದನ್ನು ಬಸವರಾಜ ಬೊಮ್ಮಾಯಿಯವರು ಒಂದು ದಿನ ನನಗೆ ಹೇಳಿದರು. ಅದೇ ರೀತಿ ಇವರಿಗೆ ಹೃದಯ ಶ್ರೀಮಂತಿಕೆ ಇರಬೇಕು. ಅದನ್ನು ಬಿಟ್ಟು ಬರೀ ಐದು ಕ್ಷೇತ್ರಗಳಿಗೆ ಮಾತ್ರ ಕೋಟ್ಯಾಂತರ ರೂಪಾಯಿಗಳ ಹಣವನ್ನು ತಂದು, ಬೇರೆ ಕ್ಷೇತ್ರಗಳಿಗೆ ತಾರತಮ್ಯ ಮಾಡಿ, ಬೇರೆ ಕ್ಷೇತ್ರಗಳಿಗೆ ಸರಿಯಾದ ರೀತಿಯಲ್ಲಿ ಹಣವನ್ನು ಕೊಡದೇ, ಬರೀ ಚುನಾವಣೆ ದೃಷ್ಟಿಯನ್ನು ಇಟ್ಟುಕೊಂಡು ಇವತ್ತು ಮಾನ್ಯ ಮುಖ್ಯಮಂತ್ರಿಗಳು ರಾಜಕಾರಣ ಮಾಡುವುದು ಸರಿಯಿಲ್ಲ. ಈಗಾಗಲೇ

election date ಪ್ರಾರಂಭವಾಗಿದೆ. ಈ ಐದು ಕ್ಷೇತ್ರಗಳಲ್ಲಿ ಹೊಸದಾಗಿ planned ಇಲ್ಲದೇ ಇದ್ದರೂ ಕಾಮಗಾರಿಗಳನ್ನು ಇವರು ಮಂಜೂರು ಮಾಡುವುದಕ್ಕೆ ಹೊರಟಿದ್ದಾರೆ, ಇದನ್ನು ನಿಲ್ಲಿಸುವಂಥ ಕೆಲಸ ಮಾಡಬೇಕು. ಇದನ್ನು ನಾವು ಅಷ್ಟು ಸಲೀಸಾಗಿ ಬಿಡುವುದಿಲ್ಲ. ಜಿಲ್ಲಾ ಪಂಚಾಯಿತಿಗಳಿರಬಹುದು, ಬಿ.ಡಿ.ಎ. ಇರಬಹುದು, ಕಾರ್ಪೊರೇಷನ್ ಇರಬಹುದು ಯಾವುದೇ ಇಲಾಖೆಯ ಅಧಿಕಾರಿಗಳಿಗೆ ತಮ್ಮ ಮುಖಾಂತರ ಹೇಳುತ್ತೇನೆ. ಅಧಿಕಾರಿಗಳಿಗೆ ಈ ವ್ಯವಸ್ಥೆ ಶಾಶ್ವತವಲ್ಲ. ಬೇಕಾದಷ್ಟು ಬದಲಾವಣೆಗಳು ಆಗುತ್ತದೆ. ಹಾಗೆಂದು ತಿಳಿದುಕೊಂಡು plan ಇಲ್ಲದೇ, ವಿಶೇಷವಾಗಿ ತೆಗೆದುಕೊಂಡು ಈ ರೀತಿ ರಾಜಕಾರಣ ಮಾಡುವುದು ಸರಿಯಲ್ಲ. ಏನೇನು ಈ ಯೋಜನೆಗಳನ್ನು ತೆಗೆದುಕೊಳ್ಳಬೇಕು ಎಂದು ಹೊರಟಿದ್ದಾರೆ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಹಿ ಹಾಕಿ ಫೈಲ್ ಕಳುಹಿಸಿದ್ದಾರೆ, ಅವರೇ Finance Minister, ಅವರೇ ಮಾಡಬೇಕಾಗಿರುವುದು. ಬೇರೆ ಬೇರೆ ಇಲಾಖೆಗಳಲ್ಲಿ ಏನೇನೋ ಆಗುತ್ತಿದೆ. Election date announce ಆಗಿರುವುದರಿಂದ Code of Conduct ಪ್ರಾರಂಭವಾಗುತ್ತಿದೆ. ನಿನ್ನೆ ಸಾಯಂಕಾಲದಿಂದ ಕೆಲವು ಜಿಲ್ಲೆಯಲ್ಲಿ ಆಗಿದೆ. ಏನೇನು ಮಾಡಬೇಕು ಎಂದಿದ್ದಾರೆ, ಕೂಡಲೇ ಈ ಎಲ್ಲಾ ಸ್ಥಗಿತಗೊಳಿಸಿ, ಬಜೆಟ್‌ನಲ್ಲಿ ಇರುವ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತ್ ಮತ್ತು RDPR ಇಲಾಖೆಯಿಂದ ಬಜೆಟ್ ಕಾರ್ಯಕ್ರಮ ತೆಗೆದುಕೊಳ್ಳಲಿ ಹಾಗೂ ಬೇರೆ ಯಾವುದಾದರೂ ಒಂದು ಸ್ಕೀಂಗೆ ಬಜೆಟ್‌ನಲ್ಲಿ ಏನಾದರೂ announce ಮಾಡಿದರೆ ಅದನ್ನು ತೆಗೆದುಕೊಳ್ಳಿ. ಆದರೆ, ಹೊಸದಾಗಿ ಈ ಕ್ಷೇತ್ರಗಳಲ್ಲಿ ಮಾಡಬಾರದು. ಅವರು ಏನಾದರೂ ನಿಲ್ಲಿಸಲಿಲ್ಲವೆಂದರೆ, ಇದರ ವಿರುದ್ಧ ಉಗ್ರವಾದಂಥ ಹೋರಾಟವನ್ನು ನಾವು ಪ್ರಾರಂಭ ಮಾಡುತ್ತೇವೆ. ನಮಗೆ ಭರವಸೆಯಿದೆ. ನಾನು ಇಂತಹ ರಾಜಕಾರಣ ಮಾಡುವುದಿಲ್ಲ ಎಂದು ಮತ್ತು ನಾನು ಕ್ಷುಲ್ಲಕ ರಾಜಕಾರಣ ಮಾಡುವುದಿಲ್ಲ ಎಂದು ಈ ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಈ ಮನೆಗೆ ಮತ್ತು ಈ ರಾಜ್ಯಕ್ಕೆ ಆ ರೀತಿ ಮಾಡುವುದಿಲ್ಲ ಎನ್ನುವ ಭರವಸೆ ಕೊಡುತ್ತಾರೆ ಎನ್ನುವ ನಂಬಿಕೆ ನಮಗೆ ಇದೆ.

ಚರ್ಚೆಗೆ ತೆಗೆದುಕೊಳ್ಳುವುದು, ಬಿಡುವುದು next point. ಇಲ್ಲಿ ಅವರೇ ಇಂತಹ ಕೆಲಸ ಮಾಡುವುದಿಲ್ಲವೆಂದು ಉತ್ತರ ಕೊಟ್ಟರೇ ಹೇಗೆ? ದಯವಿಟ್ಟು ಚರ್ಚೆಗೆ ಮೊದಲು ಅವಕಾಶ ಕೊಡಿ. ಆಮೇಲೆ ಉಳಿದಿದ್ದು ಬೇರೆ ವಿಚಾರ.

ಉಪಾಧ್ಯಕ್ಷರು: ಈಗ ಮಾನ್ಯ ಟಿ.ಬಿ. ಜಯಚಂದ್ರ ಅವರು Preliminary submission ಮಾಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ: ಸನ್ಮಾನ್ಯ ಸಭಾಧ್ಯಕ್ಷರೆ, ನಾನು Preliminary submit ಮಾಡಿಬಿಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಅಲ್ಲ, ಏಳು ಜನ sign ಮಾಡಿದ್ದಾರೆ, ಏಳೂ ಜನರ ಹತ್ತಿರವೂ Preliminary submission ಮಾಡಿಸುತ್ತೀರಾ? ಎಲ್ಲರ ಪರವಾಗಿ ಮಾನ್ಯ ಡಿ.ಕೆ ಶಿವಕುಮಾರ್ ಅವರು ಚೆನ್ನಾಗಿ ಮಾತನಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಅಲ್ಲ, preliminary submission ಅಂದರೆ, ನಾವು ಮಾನ್ಯ ಸಭಾಧ್ಯಕ್ಷರ ಮನಸ್ಸನ್ನು ಒಲಿಸುವಂಥದ್ದಾಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್: ನಿಮಗೆ ಇನ್ನೂ ವಿಶ್ವಾಸ ಬಂದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮನಸ್ಸನ್ನು ಒಲಿಸುತ್ತೇವೆಂದು ಹೇಳಿ ಏಕೆಂದರೆ ಅವರು ನಮ್ಮ ಕಡೆ ಇರುತ್ತಾರೆ ಅವರ ಕಷ್ಟಕ್ಕೆ ಅವರ ರಕ್ಷಣೆಗೆಲ್ಲಾ ಬರತಕ್ಕಂಥವರು ನಾವು. ನಿಲುವಳಿ ಸೂಚನೆಯನ್ನು ಏಕೆ ತೆಗೆದುಕೊಳ್ಳಬೇಕೆನ್ನುವ ವಿಚಾರ ಬರುತ್ತದೆ. ಬಹುಶಃ ನಾವೆಲ್ಲರೂ ಕೂಡ ಪಕ್ಷದ ಆಧಾರದ ಮೇಲೆ ಗೆದ್ದು ಬರುತ್ತೇವೆ. ಆದರೆ, ಈ ಮನೆಯೊಳಗೆ ಬರಬೇಕಾದಾಗ ಯಾರು ಬಹುಮತ ಇರುತ್ತಾರೋ ಅವರು ಮುಖ್ಯಮಂತ್ರಿಗಳಾಗುತ್ತಾರೆ, ಅವರು ಸಭಾ ನಾಯಕರಾಗುತ್ತಾರೆ. ಬಹುಮತ ಇಲ್ಲದೇ ಇರುವವರು ಇವತ್ತು ವಿರೋಧಪಕ್ಷದಲ್ಲಿ ಕುಳಿತುಕೊಳ್ಳುತ್ತಾರೆ. ಇಲ್ಲಿ ಪಕ್ಷದ ರಾಜಕಾರಣ ಇರುವುದಿಲ್ಲ. ಪಕ್ಷದ ರಾಜಕಾರಣ ಇರುವುದಕ್ಕೆ ಸಾಧ್ಯವಿಲ್ಲ. ಆದರೆ, ನಾವು ಏನು

ಮಾಡುತ್ತಿದ್ದೇವೆಂದರೆ, ನಾವು ಎಷ್ಟೇ ಪಕ್ಷದಲ್ಲಿ identify ಆಗಿದ್ದರೂ ಸಹಾ, ಚರ್ಚೆಯಲ್ಲಿ ಪರವಾಗಿ ಮಾತನಾಡಬಹುದು ಅಥವಾ oppose ಮಾಡಬಹುದು, ನಾವು ಏನೇ ಚರ್ಚೆ ಮಾಡಿದರೂ ಕೂಡ ಹಣಕಾಸಿನ ಯಾವುದೇ ವಿಚಾರ ಬಂದಾಗ, ನಾವು ಸಂಪೂರ್ಣವಾಗಿ ಸರ್ವಾನುಮತದಿಂದ ತೀರ್ಮಾನವನ್ನು ಕೊಡುತ್ತೇವೆ. ವಿಶ್ವಾಸವೆಂದರೆ, ಸಭಾನಾಯಕ–ರಾಗಿರುವಂಥವರು ವಿಶ್ವಾಸದಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆಯಿಂದ ಗ್ರಾಂಟ್ಸ್ ಕೊಡತಕ್ಕಂಥ ಸಂಪ್ರದಾಯ ದೇಶದಲ್ಲಿ, ರಾಜ್ಯದಲ್ಲಿ ಇತ್ತು. ಆದರೆ, ಕಳೆದ ಒಂದು ವರ್ಷದಿಂದ ಜಾಡು ಬಿದ್ದಂತಾಗಿದೆ. 31ನೇ ತಾರೀಖು ಬಿಎಸಿ ಸಭೆ ಕರೆದಂತಹ ಸಂದರ್ಭದಲ್ಲಿ ಬಿಲ್ ಪಾಸ್ ಮಾಡಬೇಕೆಂದು ಹೇಳಿದಿರಿ, ಆಗ ನಾವು ನಿಮ್ಮ ಬಿಲ್ ಅನ್ನು oppose ಮಾಡುತ್ತೇವೆಂದು ಹೇಳಿದ್ದೇವಾ, ಪಾಸ್ ಮಾಡಿ ಕೊಡುತ್ತೇವೆಂದು ಹೇಳಿದ್ದೆವು, ಮಾಡಿಕೊಡುತ್ತೇವೆ. ಆದರೆ, ನಮ್ಮಿಂದ ವಿಶ್ವಾಸವನ್ನು ಬಯಸಿ, ನಮ್ಮ ನಂಬಿಕೆಯನ್ನು ತೆಗೆದುಕೊಂಡವರು, ಸರ್ಕಾರ ಹಣವನ್ನು ಕೊಡಬೇಕಾದಾಗ, ಬೇರೆ ಬೇರೆ ಕ್ಷೇತ್ರಕ್ಕೆ ಒಂದೊಂದು ರೀತಿಯಲ್ಲಿ ಹೆಚ್ಚಿಗೆ ಹಣವನ್ನು ಕೊಟ್ಟುಕೊಂಡು ಹೋದರೆ, ತಾರತಮ್ಯ ಮಾಡಿದರೆ ಇದು ನಿಮಗೆ ಒಪ್ಪಿಗೆಯೇ? ದಯಮಾಡಿ, ಯೋಚನೆ ಮಾಡಿ. ಈಗಾಗಲೇ ಮಾನ್ಯ ಶಿವಕುಮಾರ್ ಅವರು ಅಂಕಿ–ಅಂಶ ಕೊಟ್ಟಿದ್ದಾರೆ. ಐದು ಉಪಚುನಾವಣೆಯಲ್ಲಿ ಯಾವ ರೀತಿಯಾಗಿ ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಇವತ್ತು ಗ್ರಾಂಟ್ ಕೊಡತಕ್ಕಂಥಾದ್ದು, ಸರ್ಕಾರ ಆ ಕೆಲಸ, ಈ ಕೆಲಸ ಮಾಡುತ್ತಿದೆ ಎಂದು ಪ್ರಚಾರ ಮಾಡತಕ್ಕಂಥಾದ್ದು ಒಂದು ರೀತಿಯಲ್ಲಿ corrupt practice ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ಆದರೆ, ಒಂದು ಸತ್ಸಂಪ್ರದಾಯವನ್ನು ಹಾಕಬೇಕಾಗುತ್ತದೆ. ನೀವು ಅರ್ಥ ಮಾಡಿಕೊಳ್ಳಬೇಕು, ನೀವು ಅಧಿಕಾರದಲ್ಲಿದ್ದೀರಿ, ಖರ್ಚು ಮಾಡತಕ್ಕಂಥ ಶಕ್ತಿ ಇದೆ ಮಾಡುತ್ತೀರಿ. ಆದರೆ, ಇದು corrupt practice ಆಗುತ್ತದೆ. ಅದನ್ನು ಮಾಡುವುದು ಬೇಡ ಎಂದು ಹೇಳುವುದರ ಜೊತೆಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಈಗ ಒಂದೇ ಒಂದು ಚುನಾವಣೆ ಘೋಷಣೆಯಾಗಿರುವಂಥಾದ್ದು, ಚನ್ನಪಟ್ಟಣದ ಚುನಾವಣೆ. ಇನ್ನೂ ನಾಲ್ಕು ಚುನಾವಣೆಗಳು ಘೋಷಣೆಯಾಗಬೇಕಾಗಿದೆ. ಹಿಂದೆ ಯಾವ ರೀತಿ ಇತ್ತೆಂದರೆ, ಯಾವುದೇ ಉಪಚುನಾವಣೆಗಳು ಆದರೂ ಸಹ

ಮುಖ್ಯಮಂತ್ರಿಗಳಾಗಿರತಕ್ಕಂಥವರು ಚುನಾವಣಾ ಪ್ರಚಾರಕ್ಕೆ ಹೋಗುತ್ತಾ ಇರಲಿಲ್ಲ. ಅಂತಹ ಇತಿಹಾಸ, ಸಂಪ್ರದಾಯಗಳು ಬಹಳ ದಿವಸಗಳಿಂದಲೂ ನಡೆದುಕೊಂಡು ಬಂದಿದೆ. ಇಂತಹ ಉಪ ಚುನಾವಣೆಗಳಿಗೆ ಹೆಚ್ಚು ಮಹತ್ವವನ್ನು ಕೊಡದೇ ಇರತಕ್ಕಂಥ ವಿಚಾರಗಳು ಕೂಡ ಇತ್ತು. ಆದರೆ, ಇವತ್ತು ಎಲ್ಲವೂ ಕೂಡ ಬಿಟ್ಟು ಹೋಗಿಬಿಟ್ಟಿವೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಇವತ್ತು, ನಾಳೆ ಎಷ್ಟು ದಿವಸ ಕ್ಯಾಂಪ್ ಮಾಡುತ್ತಾರೋ ನಮಗೆ ಗೊತ್ತಿಲ್ಲ. ಅಲ್ಲಿಗೆ ಅಲ್ಲೇ ವ್ಯವಸ್ಥಿತವಾಗಿ ಪ್ರಚಾರ ಮಾಡುತ್ತಾರೆ. ಆದರೆ, ನಾನು ಕೇಳುವಂಥಾದ್ದು, ಚುನಾವಣೆ ಇರತಕ್ಕಂಥ ಐದು ಕ್ಷೇತ್ರಗಳಿಗೆ ಈ ರೀತಿಯಾಗಿ ನೀವು ವಿಶೇಷ ಹಣ ಕೊಡತಕ್ಕಂಥಾದ್ದು ಒಳ್ಳೆಯದಲ್ಲ. ಅದಕ್ಕೋಸ್ಕರ ಇದನ್ನು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡಲು ಅರ್ಹವಾದ ವಿಚಾರವಾಗಿರುವುದರಿಂದ ಒಪ್ಪಿಗೆಯನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಕುಮಾರ್ ಅವರು ಇಷ್ಟೊತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಗೀತೋಪದೇಶ ಹೇಳಿದರು. xxx

(ಗೊಂದಲ)

Sri Siddaramaiah: What is this? It is not correct. ಕಡತದಿಂದ ಇದನ್ನು ತೆಗೆದು ಹಾಕಿಸಿ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಾಕ್ಷರೆ, ಚುನಾವಣೆ ಘೋಷಣೆಯನ್ನು ನಾವು ಮಾಡುತ್ತೇವೆಯೇ? ಅವರು ಏನು ಮಾತನಾಡುತ್ತಿದ್ದಾರೆ? ಅವರಿಗೆ ಜವಾಬ್ದಾರಿ ಇದೆಯೇ? ಅವರು ಹೇಳಿರುವ ಮಾತನ್ನು ಕಡತದಿಂದ ತೆಗೆದು ಹಾಕಿಸಿ.

---

xxx ಮಾನ್ಯ ಅಧ್ಯಕ್ಷರ ಆದೇಶದಂತೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಉಪಾಧ್ಯಕ್ಷರು: ಇದನ್ನು ಕಡತದಿಂದ ತೆಗೆದುಹಾಕಲಾಗಿದೆ.

Sri Siddaramaiah: Election Commission is an autonomous body. It is a constitutional body.

(ಗೊಂದಲ)

ಉಪಾಧ್ಯಕ್ಷರು: ಒಂದು ನಿಮಿಷ, ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ ಅವರು ಮಾತನಾಡುತ್ತಾರೆ. ಎಲ್ಲರೂ ಕುಳಿತುಕೊಳ್ಳಿ. ಆಯಿತು, ಕಡತದಿಂದ ಅದನ್ನು ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ಚುನಾವಣಾ ಆಯೋಗದ ತೀರ್ಪನ್ನು ಅವರ ನಿರ್ಧಾರಗಳನ್ನು ಪ್ರಶ್ನೆ ಮಾಡುವಂಥಾದ್ದು ನಮಗೆ ಯಾರಿಗೂ ಕ್ಷೋಭೆ ತರುವಂಥಾದ್ದಲ್ಲ. ಅದನ್ನು ಕಡತದಿಂದ ತೆಗೆದು ಹಾಕಿಬಿಡಿ. ಮತ್ತೊಮ್ಮೆ ಈ ರೀತಿ ಮರುಕಳಿಸದಂತೆ ನಾನು ಎಚ್ಚರವಹಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು: ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ನಾವು ಏನು 60ರ ನಿಯಮದಡಿಯಲ್ಲಿ ವಿಚಾರವನ್ನು ತಂದಿದ್ದೇವೆ ಅದಕ್ಕೆ ತಾವು ಅನುಮತಿ ಕೊಡುತ್ತೀರೆಂದು ನಮಗೆ ವಿಶ್ವಾಸವಿದೆ. ನೀವು convince ಆದರೆ, ಅನುಮತಿ ಕೊಟ್ಟರೆ ಚರ್ಚೆ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ನಾವು ನಿಯಮ 60ರ ಅಡಿಯಲ್ಲಿ ತಂದಿರತಕ್ಕಂಥಾ ವಿಷಯವಿದೆಯಲ್ಲಾ ಅದನ್ನು ನಾವು ಏಕೆ ತಂದಿದ್ದೇವೆಂದರೆ, ಅಭಿವೃದ್ಧಿ ಕೆಲಸಗಳಿಗೆ ಎಷ್ಟು ಹಣ ಖರ್ಚು ಮಾಡಬೇಕು? Annual statementನಲ್ಲಿ ಎಷ್ಟು ಹಣ ಖರ್ಚು ಮಾಡಲಿಕ್ಕೆ ಹೇಳಿರುತ್ತಾರೆ, ಅವುಗಳಿಗೆಲ್ಲಾ ನಾವು ಇಲ್ಲಿ ಒಪ್ಪಿಗೆ ಕೊಡುತ್ತೇವೆ. ನಾಳೆ ಪ್ರತಿಯೊಂದು ಬೇಡಿಕೆಗೂ, ಪ್ರತಿಯೊಂದು ಇಲಾಖೆಯಿಂದ ಸರ್ಕಾರ ಎಷ್ಟೆಷ್ಟು ಹಣ ಖರ್ಚು ಮಾಡುತ್ತದೆ, ಹೇಗೆ ಖರ್ಚು ಮಾಡುತ್ತದೆ ಎನ್ನುವುದಕ್ಕೆಲ್ಲಾ ನಾವು ಒಪ್ಪಿಗೆಯನ್ನು ಕೊಡುತ್ತೇವೆ. We are responsible for every pie of the money which the Government is going to spend. ಈಗ ಐದು ಉಪಚುನಾವಣೆಗಳು ಬಂದಿವೆ. ಚುನಾವಣೆ ಬಂದ ತಕ್ಷಣವೇ, ಇದಕ್ಕೆ ವಿಶೇಷವಾಗಿ ಗೋವಿಂದರಾಜನಗರ ಕ್ಷೇತ್ರ, ಉಪ ಚುನಾವಣೆ ನಡೆಯಬೇಕಾಗಿರುವ ಜಾಗ. ನಾನು orders ನೋಡಿದೆ. ಚನ್ನಪಟ್ಟಣ, ಗೋವಿಂದರಾಜನಗರಕ್ಕೆ 36½ ಕೋಟಿ ರೂಪಾಯಿಗಳನ್ನು ಬಿಡಿಎ ಯಿಂದ ಗೋವಿಂದರಾಜನಗರದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕೋಸ್ಕರವಾಗಿ ಮಾನ್ಯ ಮುಖ್ಯಮಂತ್ರಿಗಳು ರುಜು ಮಾಡಿ, ಬಿಡಿಎಗೆ ಆದೇಶ ಕೊಟ್ಟು ಬಿಡುಗಡೆ ಮಾಡಿದ್ದಾರೆ. ಆಗಲೇ ಆದೇಶ ಬಂದಿದೆ. ಚುನಾವಣೆ ಘೋಷಣೆಯಾಗಿಲ್ಲ ನಿಜ. ಇದು ಚುನಾವಣಾ malpractice ಆಗುವುದಿಲ್ಲವೇ? ಚುನಾವಣೆ ಘೋಷಣೆಯಾಗುವ ಸಂದರ್ಭದಲ್ಲೇ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಬೇಕು? ಯಾವುದೇ policy decisionಗಳನ್ನು ಮಾಡಬಾರದೆಂದು ಏಕೆ ಮಾಡುತ್ತಾರೆ? Because, ಸರ್ಕಾರವು ಯಾವುದೇ ಉಪಚುನಾವಣೆಯಲ್ಲಿ ಮತದಾರರಿಗೆ ಆಮಿಷ ಒಡ್ಡಬಾರದು, ಆ ಮೂಲಕ ಮತದಾರರ ಮನ ಒಲಿಸಿಕೊಳ್ಳುವಂತಹ ಪ್ರಯತ್ನ ಮಾಡಬಾರದು, ಚುನಾವಣೆಗಳಲ್ಲಿ ಅಕ್ರಮಗಳು ಆಗಬಾರದು, ಎನ್ನುವ ಕಾರಣಕ್ಕೋಸ್ಕರವೇ ಅಷ್ಟೆಲ್ಲಾ ಕಾನೂನುಗಳನ್ನು ನಾವು ಮಾಡಿಕೊಂಡಿರುವುದು. In such being the case, ಇಂತಹ ಕೆಟ್ಟ ಪದ್ಧತಿಗಳು ಕಳೆದ ನನ್ನ ಉಪಚುನಾವಣೆಯಲ್ಲಿ ಪ್ರಾರಂಭವಾಯಿತು. ಅದಕ್ಕಿಂತ ಹಿಂದೆ ಯಾವುದಾದರೂ ಒಂದು ಉಪಚುನಾವಣೆ ನಡೆದಿರುವಾಗ, ಯಾವುದಾದರೂ ಸರ್ಕಾರ

ಚುನಾವಣೆ ಸಂದರ್ಭದಲ್ಲಿ ವಿಶೇಷ ಗ್ರಾಂಟ್ಸ್ ಕೊಟ್ಟಿರುವ ನಿದರ್ಶನವಿದ್ದರೆ ತೋರಿಸಿ, nowhere in the history of Karnataka in any by-election ನಾವು ಸರ್ಕಾರದಲ್ಲಿದ್ದೆವು. ಮಾನ್ಯ ಗೋಪಾಲಕೃಷ್ಣ ಅವರು ಇದ್ದಾಗ, ಆಗ ಒಂದು ರೂಪಾಯಿ ಏನಾದರೂ ಕೊಟ್ಟಿದ್ದೇವೆಯೇ ಕೇಳಿ. ಮಾನ್ಯ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿಗಳಾಗಿದ್ದರು. ಒಂದೇ ಒಂದು ರೂಪಾಯಿ additional ಆಗಿ ಕೊಟ್ಟಿದ್ದೇವೆಯೇ? ನನ್ನ ಉಪ ಚುನಾವಣೆಯಲ್ಲಿ ಪ್ರಾರಂಭವಾಯಿತು. ಕಳೆದ ಎಂಟು ಉಪ ಚುನಾವಣೆಗಳಲ್ಲಿ ಪ್ರಾರಂಭವಾಯಿತು. ಈಗ ಮತ್ತೆ ಇದು continue ಆಗುತ್ತಿದೆ. ಇದು wrong precedent ಆಗುತ್ತದೆ. ಸರ್ಕಾರ ಆ ಕ್ಷೇತ್ರಗಳಿಗೆ ಮಾಡುವಂಥ ಪ್ರವೃತ್ತಿ ಇದೆಯಲ್ಲಾ, ಒಂದು ಕಡೆ growth with equity ಎಂದು budgetನಲ್ಲಿ ಬರೆದುಕೊಳ್ಳುತ್ತೇವೆ. Equitable distribution of resources, inclusive growth ಈ ಪದಗಳಿಗೆ ಏನಾದರೂ ಮೂರು ಕಾಸಿನ ಬೆಲೆ ಇದೆಯೇ? ಕೆಲವು ಕ್ಷೇತ್ರಗಳಿಗೆ ಮಾತ್ರ ಮಾಡುವುದು. ಒಂದು ಕಡೆ ನಂಜುಂಡಪ್ಪನವರ ವರದಿಯನ್ನು ಜಾರಿ ಮಾಡದೇ ಹಾಗೆಯೇ ಇದೆ. ಇನ್ನೊಂದು ಕಡೆ ತಾರತಮ್ಯ ಮಾಡಿ, ಚುನಾವಣೆಗೋಸ್ಕರವಾಗಿ ಈ ಕ್ಷೇತ್ರಗಳಿಗೆ ಮನಸೋ ಇಚ್ಛೆ ಹಣವನ್ನು ಕೊಡುವಂಥಾದ್ದು ಸರಿಯಾದ ಕ್ರಮವಲ್ಲ. ಇದಕ್ಕೆ ಅಂತಿಮವಾಗಿ ನಾವು ಮಂಗಳ ಹಾಡಬೇಕು. ಅದಕ್ಕೋಸ್ಕರವಾಗಿ ಇದು ಚರ್ಚೆಗೆ ಬಹಳ ಅರ್ಹವಾದಂಥ ವಿಚಾರ. ಇತ್ತೀಚೆಗೆ ನಡೆದಂತಹ ವಿಚಾರ. ಮೊನ್ನೆ orders ಆಗಿರುವ ವಿಚಾರ. ಈಗ ಒಂದು ಚುನಾವಣೆ ಘೋಷಣೆಯಾಗಿದೆ. ಉಳಿದ ನಾಲ್ಕು ಚುನಾವಣೆಗಳು ಬರುತ್ತಿವೆ. ಆದ್ದರಿಂದ ಇದರ ಬಗ್ಗೆ ಸುದೀರ್ಘವಾದ ಚರ್ಚೆಯಾಗಬೇಕು. ಅಂತಿಮವಾಗಿ ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಅದಕ್ಕೋಸ್ಕರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಸನ್ಮಾನ್ಯ ಉಪಾಧ್ಯಕ್ಷರೆ, ಪ್ರತಿ ಪಕ್ಷದ ನಾಯಕರು ಮತ್ತು ಇತರ ಹಿರಿಯ ಸದಸ್ಯರು.. ..

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಉಪಾಧ್ಯಕ್ಷರೆ, ...

ಉಪಾಧ್ಯಕ್ಷರು: ತಾವು ಅದಕ್ಕೆ ಸಹಿ ಮಾಡಿಲ್ಲ. ಇಲ್ಲ, No. ತಾವು ಉತ್ತರ ಕೊಡಿ.

ಶ್ರೀ ಎಸ್. ಸುರೇಶ್‌ಕುಮಾರ್: ಚರ್ಚೆಗೆ ಅವಕಾಶ ಕೊಟ್ಟಾಗ ತಾವು ಮಾತನಾಡಿ.

ಉಪಾಧ್ಯಕ್ಷರು: ಇದು ಚರ್ಚೆಯಲ್ಲ. ಚರ್ಚೆಯಾಗುವಾಗ ತಾವು ಮಾತನಾಡಿ.

ಶ್ರೀ ಸಿ.ಎಸ್. ಪುಟ್ಟೇಗೌಡ: ಇತ್ತ ಕಡೆಯಿಂದ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾರೆಂದರೆ, ನಿಮಗೆ ಅಲರ್ಜಿ ಅಲ್ಲವೇ? ಮಾನ್ಯ ಸುರೇಶ್‌ಕುಮಾರ್‌ರವರೆ, ಇತ್ತ ಕಡೆಯಿಂದ ಮಾನ್ಯ ಸದಸ್ಯರು ಯಾರಾದರೂ ನಿಂತು ಮಾತನಾಡುತ್ತಾರೆಂದರೆ, ಸಂಯಮದಿಂದ ಕೇಳಬೇಕಾಗುತ್ತದೆ.

ಉಪಾಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಚರ್ಚೆಗೆ ಅವಕಾಶ ಕೊಟ್ಟಾಗ ಮಾತನಾಡಿ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಉಪಾಧ್ಯಕ್ಷರೆ, ಇವತ್ತು ಮತ್ತೆ ನಿಯಮ 60ರ ಮೇರೆಗೆ ಇನ್ನೊಂದು ವಿಚಾರವನ್ನು ಪ್ರಸ್ತಾಪಿಸುತ್ತಿದ್ದಾರೆ. ವಿಶೇಷವಾಗಿ ಉಪ ಚುನಾವಣೆ ಜರುಗುತ್ತಿರುವ ಕ್ಷೇತ್ರಗಳ ಬಗ್ಗೆ ವಿಶೇಷ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುತ್ತಿದೆಯೆಂಬ ಭಾವನೆಯಿಂದ ಇಲ್ಲಿ ಪ್ರಸ್ತಾಪಿಸುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಒಂದು ನಿಮಿಷ ತಾಳಿ. ನೀವು ಮಾತನಾಡುವಾಗ ನಾವು ಸುಮ್ಮನೆ ಕುಳಿತುಕೊಳ್ಳಬೇಕು. ಇವತ್ತು ಮಾನ್ಯ ಸಿದ್ದರಾಮಯ್ಯನವರು ಹೇಳಿರುವ ವಿಶೇಷವಾದ ಒಂದು ಮಾತು ನನಗೆ ಬಹಳ ಹಿಡಿಸಿತು. ಒಂದು ವ್ಯವಸ್ಥೆಯನ್ನು ನಾವು ಗಟ್ಟಿಗೊಳಿಸಬೇಕೇ ಹೊರತು ದುರ್ಬಲಗೊಳಿಸುವುದಕ್ಕೆ ಪ್ರಯತ್ನಿಸಬಾರದು. ಈ ಹಿಂದೆ ನಮ್ಮದೊಂದು ಪ್ರಯತ್ನ ಶುರುವಾಗಿತ್ತು. ಆದರೆ, ಇದು precedent ಆಗಬಾರದೆಂಬ ಒಂದು

ಮಾತನ್ನು ತಾವು ಹೇಳಿದ್ದೀರಿ. Before going to the merits, ಮಾನ್ಯ ಉಪಾಧ್ಯಕ್ಷರ ಗಮನಕ್ಕೆ ನಾನು ಒಂದು ವಿಚಾರ ತರುತ್ತೇನೆ. ಪ್ರತಿ ದಿವಸವೂ ನಿಯಮ 60ರಡಿ ಒಂದೊಂದು ವಿಷಯವನ್ನು ತರುತ್ತಿದ್ದಾರೆ. ಅದು ನಿಮ್ಮ ಹಕ್ಕು. ವಿಷಯ ತರುವುದಕ್ಕೆ ನಿಮಗೆ ಅವಕಾಶವಿದೆ. ಆದರೆ, ವಿಷಯ ತಂದಾಗ ಸನ್ಮಾನ್ಯ ಸಿದ್ದರಾಮಯ್ಯನವರು ಹಿಂದೆ ದೀರ್ಘಕಾಲ ಹಣಕಾಸಿನ ಸಚಿವರಾಗಿದ್ದರು. ಹಾಗೆಯೇ, ಮಾನ್ಯ ಶ್ರೀ ಟಿ.ಬಿ. ಜಯಚಂದ್ರರವರು ಮತ್ತು ಶ್ರೀ ಡಿ.ಕೆ. ಶಿವಕುಮಾರ್ ಇವರೆಲ್ಲರೂ ಆಡಳಿತ ನಡೆಸಿದಂತಹವರು. ನಿಲುವಳಿ ಸೂಚನೆಗೂ ಒಂದು ಮಹತ್ವವಿದೆ. ಆ ಮಹತ್ವಕ್ಕೆ ತಕ್ಕಂತೆ ನಾವು ನಿಲುವಳಿ ಸೂಚನೆ ತರಬೇಕು. ನಾನು ಈ ವಿಚಾರದ ಬಗ್ಗೆ ಹೇಳುತ್ತಿಲ್ಲ. ವಿಶೇಷವಾಗಿ ನಿಲುವಳಿ ಸೂಚನೆಯಲ್ಲಿ ಸಾರ್ವಜನಿಕ ಮಹತ್ವವುಳ್ಳ ಒಂದು ವಿಚಾರವಾಗಿರಬೇಕು. ಇದು ಮೊದಲನೆಯದು.

ಎರಡನೆಯದು, ಇತ್ತೀಚೆಗೆ ನಡೆದ ನಿರ್ದಿಷ್ಟ ವಿಷಯಕ್ಕಷ್ಟೇ ಸೀಮಿತವಾಗಿರಬೇಕು. ಹೀಗಿರುವಾಗ, ಇವರ ಬಹಳ ದೀರ್ಘವಾಗಿ ಹಾಸನ ರಾಜೀವಗಾಂಧಿ ವಸತಿ ಯೋಜನೆಯಡಿ ಮುಜರಾಯಿ ಇಲಾಖೆ, ಹೀಗೆ ಎಲ್ಲವನ್ನೂ ಕೂಡ ಕ್ಲಬ್ ಮಾಡಿ ನಿಲುವಳಿ ಸೂಚನೆಯಡಿ ತಂದಿದ್ದೀರಿ. ಸರ್ಕಾರ ಏನೇನು ಮಾಡಿದೆ, ಮಾಡಿಲ್ಲವೆಂದು ಅವರು ಆಪಾದಿಸುತ್ತಾರೋ, ಅದೆಲ್ಲದಕ್ಕೂ ನಾವು ಉತ್ತರಿಸುವುದಕ್ಕೆ ಸಿದ್ಧರಿದ್ದೇವೆ. ಆದರೆ, ನಾನು ಮಾನ್ಯ ಉಪಾಧ್ಯಕ್ಷರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ನಿಲುವಳಿ ಸೂಚನೆಯನ್ನು ಏನು ಕೊಟ್ಟಿದ್ದಾರೆ, ಇದನ್ನು ನಿಯಮ 60ರಡಿ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ನಿಮ್ಮ ತೀರ್ಮಾನಕ್ಕೆ ಬಿಡುತ್ತೇನೆ. ಯಾವ ನಿಯಮದಡಿ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ತಾವು ಅವಕಾಶ ಕಲ್ಪಿಸುತ್ತೀರೋ, ಆ ನಿಯಮದಡಿ ಸರ್ಕಾರದವರಾದ ನಾವು ಉತ್ತರಿಸುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಸಿದ್ದರಾಮಯ್ಯ: ಇದು ಇತ್ತೀಚೆಗೆ ನಡೆದಿರುವುದು. ಕಳೆದ ತಿಂಗಳು 36 ಕೋಟಿ ರೂಪಾಯಿಗಳನ್ನು ಗೋವಿಂದರಾಜ ನಗರಕ್ಕೆ ಮಾನ್ಯ ಮುಖ್ಯಮಂತ್ರಿಯವರೇ ಸಹಿ ಮಾಡಿ ಹಣ ಬಿಡುಗಡೆ ಮಾಡಿರುವ ಆದೇಶ ಹೊರ ಬಿದ್ದಿದೆ. ಈಗ ಚುನಾವಣೆ ಇದೆ. ಸೆಪ್ಟೆಂಬರ್‌ನಲ್ಲೋ, ಅಕ್ಟೋಬರ್

ಮೊದಲ ವಾರದಲ್ಲೋ ಚುನಾವಣೆಯಾಗುತ್ತದೆ. ಈಗಾಗಲೇ ಚುನಾವಣೆ ಘೋಷಣೆಯಾಗಿ ಬಿಟ್ಟಿದೆ. ಇನ್ನು ನಾಲ್ಕು ಚುನಾವಣೆಗಳಾಗುತ್ತದೆ. ಗೋವಿಂದರಾಜ ನಗರಕ್ಕೂ ಉಪ ಚುನಾವಣೆ ನಡೆಯುತ್ತದೆ. ಚನ್ನಪಟ್ಟಣಕ್ಕೆ ಈಗಾಗಲೇ ಸುಮಾರು ಏಳೂವರೆ ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಆದೇಶ ಹೋಗಿದೆ. ಆದುದರಿಂದ, ನಾನು ಇತ್ತೀಚೆಗೆ ನಡೆದಿರುವ ಘಟನೆ ಬಗ್ಗೆಯೇ ಹೇಳುತ್ತಿರುವುದು. ಇದು relevant ಆಗಿರುವಂಥಾದ್ದೇ. ನನ್ನ ಪ್ರಕಾರ ಇದು ಕಾನೂನಿನ ಚೌಕಟ್ಟಿನೊಳಗೆ ಈಗ ಚುನಾವಣೆ ಘೋಷಣೆಯಾಗಿಲ್ಲದೇ ಇರಬಹುದು, Code of Conduct ಜಾರಿಗೆ ಬರದೇ ಇರಬಹುದು. ಚುನಾವಣೆ ಇನ್ನು ಎರಡು ತಿಂಗಳುಗಳಲ್ಲಿ ಆಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಶೇಷ ಅನುದಾನಗಳನ್ನು ಬಿಡುಗಡೆ ಮಾಡಿದರೆ it amounts to election malpractices. ಆ ಕಾರಣದಿಂದ, ಇದು ಬಹಳ ಪ್ರಾಮುಖ್ಯವಾಗಿರುವ ವಿಚಾರವಾಗಿರುವುದರಿಂದ ಮತ್ತು ಜರೂರಾಗಿರುವ ವಿಚಾರವಾಗಿರುವುದರಿಂದ ಇದನ್ನು ನಿಲ್ಲಿಸದೇ ಹೋದರೆ ದುಡ್ಡು ಬಿಡುಗಡೆಯಾಗುತ್ತದೆ, ಕೆಲಸಗಳು ಪ್ರಾರಂಭವಾಗುತ್ತವೆ, ಎಲ್ಲಾ ಕಾಮಗಾರಿಗಳಿಗೂ ಟೆಂಡರ್‌ಗಳನ್ನು ಕರೆಯುತ್ತಾರೆ, ಜನರೆಲ್ಲರಿಗೂ ಮೆಸೇಜ್ ಹೋಗುತ್ತದೆ. ಅದಕ್ಕೋಸ್ಕರ, ಇದು ಅತ್ಯಂತ ಜರೂರಾಗಿದೆ. ದಯಮಾಡಿ ಈ ದಿಸೆಯಲ್ಲಿ ತಮ್ಮ ಮನವೊಲಿಸಿದ್ದೇವೆ. ಇದು ಜರೂರಾಗಿರುವ ವಿಷಯವಾಗಿರುವುದರಿಂದ ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಉಪ ನಾಯಕರಾದ ಶ್ರೀ ಟಿ.ಬಿ. ಜಯಚಂದ್ರ, ಶ್ರೀ ಡಿ.ಕೆ. ಶಿವಕುಮಾರ್ ಮತ್ತಿತರರು ನೀಡಿರುವ ನಿಲುವಳಿ ಸೂಚನೆಯು ರಾಜ್ಯದಲ್ಲಿ ಉಪ ಚುನಾವಣೆಯು ನಡೆಯಬೇಕಾಗಿರುವ ಐದು ವಿಧಾನಸಭಾ ಕ್ಷೇತ್ರಗಳಿಗೆ ವಿಶೇಷ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇತರರು ಪ್ರಾಸ್ತಾವಿಕ ನಿಲುವಳಿ ಸೂಚನೆಯ ಪರವಾಗಿ ಮತ್ತು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ವಿಷಯವು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಷಯವು ವಿಶೇಷ ಅನುದಾನ ಬಿಡುಗಡೆಗೆ ಸಂಬಂಧಿಸಿದ್ದು, ಇದೊಂದು

ಆಡಳಿತಾತ್ಮಕ ವಿಷಯವಾಗಿದೆ. ಅಲ್ಲದೆ, ಇಂತಹ ವಿಷಯಗಳನ್ನು ಈಗ ಇಲಾಖಾವಾರು ಬೇಡಿಕೆಗಳು ಸದನದ ಮುಂದೆ ಇರುವುದರಿಂದ, ಮುಂದೆ ಪ್ರಸ್ತಾಪಿಸಬಹುದಾಗಿದೆ.

ಒಂದು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ತಕ್ಷಣ ಅವಕಾಶವಿರುವಾಗ ನಿಲುವಳಿ ಸೂಚನೆಗೆ ಅವಕಾಶ ಇರುವುದಿಲ್ಲವೆಂಬುದು ಈ ಸದನದಲ್ಲಿ ನೀಡಿರುವ ಹಲವಾರು ತೀರ್ಪುಗಳಿವೆ. ಅಲ್ಲದೆ, ಕೌಲ್ ಅಂಡ್ ಶಕ್ದರ್ ಅವರ **"Practice and Procedure"** ಪುಸ್ತಕದ ಪುಟ ಸಂಖ್ಯೆ 505ರಲ್ಲಿ ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ ಮತ್ತು ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್: ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾದರೆ, ಅದನ್ನು ನಿಲ್ಲಿಸುತ್ತೇವೆ ಎಂದಾದರೂ ಹೇಳಲಿ.

ಉಪಾಧ್ಯಕ್ಷರು: ಚರ್ಚೆ ಮಾಡಬಹುದು.

ಶ್ರೀ ಸಿದ್ದರಾಮಯ್ಯ: ನಾವು ನಿಮ್ಮ ರೂಲಿಂಗ್ ಅನ್ನು ಪ್ರಶ್ನಿಸುವುದಿಲ್ಲ. I am not going to question your decision.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಮುಖ್ಯಮಂತ್ರಿಗಳಾದ ತಾವು ಎಲ್ಲಾ ವಿಚಾರಗಳನ್ನು ಮಾತನಾಡುತ್ತೀರಿ. ತಾವು ಇದರ ಬಗ್ಗೆ ಹೇಳಿ.

(ಗೊಂದಲ)

ಉಪಾಧ್ಯಕ್ಷರು: ಈಗ ಚರ್ಚೆಯನ್ನು ನಾನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಸಿದ್ದರಾಮಯ್ಯ: ಈ ತರಹವಾದರೆ ಬಹಳ ಕಷ್ಟವಾಗುತ್ತದೆ.

ಉಪಾಧ್ಯಕ್ಷರು: ಈಗ ವಿಚಾರವನ್ನು ಮುಕ್ತಾಯಗೊಳಿಸಲಾಗಿದೆ. ಇನ್ನು ಚರ್ಚೆಗೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಕಾನೂನು ಸಚಿವರು ಹೇಳುವುದಕ್ಕೆ ಏಕೆ ಅವಕಾಶವಿಲ್ಲ?